# ಕರ್ನಾಟಕ ಸರ್ಕಾರ

ಸಂಖ್ಯೆಡ: ಸಕಇ 372 ಎಸ್‌ಡಿಸಿ 2016,

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 25–10–2019.

## ಅಧಿಸೂಚನೆ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 2012 ರ ನಿಯಮ (2)ರ ಉಪ ನಿಯಮ (4)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿನಿಯಮಗಳು, 2018 ನ್ನು ಅಧಿಸೂಚನೆ ಸಂಖ್ಯೆ: ಸಕಇ 372 ಎಸ್‌ಡಿಸಿ 2016, ದಿನಾಂಕ: 10.07.2018 ನ್ನು ಕರ್ನಾಟಕ ರಾಜ್ಯ ಪತ್ರ ಸಂಪುಟ–154 ದಿನಾಂಕ: 14.02.2019 ರಂದು ಕರಡು ನಿಯಮಗಳನ್ನು ಪ್ರಕಟಿಸಿ, ಬಾದಿತರಾಗುವ ವ್ಯಕ್ತಿಗಳಿಂದ 15 ದಿನಗಳ ಒಳಗೆ ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಈ ಕರಡು ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 14ನೇ ಫೆಬ್ರವರಿ 2019 ರಂದು ಸಾರ್ವಜನಿಕರಿಗೆ ಲಭ್ಯವಾಗಿದ್ದವು.

ಈ ಕರಡು ನಿಯಮಗಳಿಗೆ ಯಾವುದೇ ವ್ಯಕ್ತಿಗಳಿಂದ ಆಕ್ಷೇಪಣೆ ಅಥವಾ ಸಲಹೆಗಳು ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧಿನಿಯಮ, 2012 (2013 ರ ಕರ್ನಾಟಕ ಅಧಿನಿಯಮ ಸಂಖ್ಯೆ: 2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರೂಪಿಸಿದೆ.

## ನಿಯಮಗಳು

## ಅಧ್ಯಾಯ–I
## ಪ್ರಾರಂಭಿಕ

**1. ಹೆಸರು ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ನಿಯಮಗಳು, 2018 ಎಂದು ಕರೆಯತಕ್ಕದ್ದು.

(2) ಇವು ಕರ್ನಾಟಕ ರಾಜ್ಯ ಪತ್ರದಲ್ಲಿ ಇವುಗಳು ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**–(1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ)"ಅಧಿನಿಯಮ"ಎಂದರೆ,ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 2012 (2013 ರ ಕರ್ನಾಟಕ ಅಧಿನಿಯಮ ಸಂಖ್ಯೆ: 2)

(ಬಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ; ಮತ್ತು

(ಸಿ) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ.

(2) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿರದ, ಆದರೆ ಅಧಿನಿಯಮದಲ್ಲಿ ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಲಾದ ಅವೇ ಅರ್ಥವನ್ನು ಅನುಕ್ರಮವಾಗಿ ಹೊಂದಿರತಕ್ಕದ್ದು.

## ಅಧ್ಯಾಯ –II
## ಸಾಮಾನ್ಯ ಉಪಬಂಧಗಳು

**3. ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ವೇತನ ಮತ್ತು ಭತ್ಯೆಗಳು.–**(1)ಸರ್ಕಾರವು ಅಧ್ಯಕ್ಷರಿಗೆ ನೀಡಿದ ಸ್ಥಾನಮಾನಗಳಿಗನುಸಾರವಾಗಿ ವೇತನ ಮತ್ತು ಭತ್ಯೆಗಳು ಮತ್ತು ಇತರೆ ವಿಶೇಷ ಸೌಲಭ್ಯಗಳಿಗೆ ಅವರು ಹಕ್ಕುಳ್ಳವರಾಗಿರತಕ್ಕದ್ದು. ಅಧ್ಯಕ್ಷರು ಕರ್ನಾಟಕ ರಾಜ್ಯದ ವಿಧಾನಮಂಡಲದ ಸದಸ್ಯರಾಗಿದ್ದರೆ, ಅವರು ಸಂಬಂಧಪಟ್ಟ ಅಧಿನಿಯಮ ಅಥವಾ ನಿಯಮಗಳ ಅಡಿಯಲ್ಲಿ ವಿಧಾನ ಮಂಡಲದ ಸದಸ್ಯರಾಗಿ ಪಡೆಯುವ ಭತ್ಯೆಗಳನ್ನು ಹೊರತುಪಡಿಸಿ, ಯಾವುದೇ ಇತರೆ ಪರಿಶ್ರಮ ಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಹಿಂದಿನ ಸೇವೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಅಥವಾ ಇತರೆ ಮೂಲಗಳಿಂದ ನಿವೃತ್ತಿ ವೇತನವನ್ನು ಪಡೆಯುತ್ತಿರುವ ಯಾವೊಬ್ಬ ವ್ಯಕ್ತಿಯು ಅಧ್ಯಕ್ಷರಾಗಿನೇಮಕಗೊಂಡಿದ್ದಲ್ಲಿ ಈ ನಿಯಮಗಳ ಅಡಿಯಲ್ಲಿ ಅವರಿಗೆ ಪಾವತಿಸಬೇಕಾದ ಒಟ್ಟು ವೇತನವು ನಿವೃತ್ತಿ ಸಮಯದಲ್ಲಿ ಅವರು ಸೆಳೆಯುತ್ತಿರುವ (ಡ್ರಾಯಿಂಗ್) ಒಟ್ಟು ಸಂಬಳದಲ್ಲಿ ನಿವೃತ್ತಿ ವೇತನವನ್ನು ಕಡಿತಗೊಳಿಸಿ ಪಾವತಿಸುವುದು.

(2) ಸದಸ್ಯ–ಕಾರ್ಯದರ್ಶಿಯನ್ನು ಹೊರತುಪಡಿಸಿ ಇತರೆ ಸದಸ್ಯರು, ಈ ಮುಂದಿನ ಉಪವೇಶನ ಸಂಭಾವನೆ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು, ಎಂದರೆ:–

(ಎ) ಆಯೋಗದ ಪ್ರತಿ ಉಪವೇಶನ/ ಸಭೆಯ ಉಪವೇಶನದ ಸಂಭಾವನೆಯು ರೂ.1000/– ಆಗಿದ್ದು ಇದು ತಿಂಗಳಿಗೆ ರೂ. 20,000/– ಮೀರತಕ್ಕದ್ದಲ್ಲ.ಸ್ಥಳೀಯ ಪ್ರಯಾಣ ವೆಚ್ಚ,ದೂರವಾಣಿ ಮತ್ತು ಲೇಖನ ಸಾಮಾಗ್ರಿ ವೆಚ್ಚಗಳಿಗಾಗಿ ಮಾಸಿಕ ಭತ್ಯೆಗಳು ರೂ. 5000/– (ಐದು ಸಾವಿರ ರೂಪಾಯಿಗಳು ಮಾತ್ರ) ಅಥವಾ ಸರ್ಕಾರ ಪ್ರತ್ಯೇಕ ಆದೇಶದ ಮೂಲಕ ನಿಗಧಿಪಡಿಸಿದ ಪ್ರತಿ ಉಪವೇಶನ/ ಸಭೆಯ ಉಪವೇಶನದ ಸಂಭಾವನೆ ಮತ್ತು ಭತ್ಯೆ ಇದರಲ್ಲಿ ಯಾವುದು ಹೆಚ್ಚಿಗೆ ಇರುತ್ತದೆಯೋ ಅದು.

(ಸಿ) ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯು ರಾಜ್ಯ ಸರ್ಕಾರದ ಗ್ರೂಪ್–ಎ ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ ಅನ್ವಯವಾಗುವಂತೆಯೇ ಇರತಕ್ಕದ್ದು, ಆಯೋಗದ ಅಂಗವಾಗಿ ಸದಸ್ಯನು ಕೈಗೊಳ್ಳುವ ಪ್ರವಾಸದ ದಿನಗಳ ಸಂಖ್ಯೆಯು ಒಂದು ತಿಂಗಳಿಗೆ 10 ದಿನಗಳನ್ನು ಮೀರತಕ್ಕದ್ದಲ್ಲ ಮತ್ತು ಅಂಥ ಪ್ರವಾಸಗಳು ಆಯೋಗದ ಪ್ರಕಾರ್ಯಕ್ಕೆ ಸಂಬಂಧಿಸಿದ ಉದ್ದೇಶಕ್ಕೆ ಸೀಮಿತವಾಗಿರತಕ್ಕದ್ದು.

(ಡಿ) ಅಧ್ಯಕ್ಷರು ಮತ್ತು ಸದಸ್ಯರು ಅಗತ್ಯವಿದ್ದರೆ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಾಜ್ಯ ಮತ್ತು ದೇಶದ ಹೊರಗೆ ಪ್ರವಾಸಗಳನ್ನು ಕೈಗೊಳ್ಳಬಹುದು.

**4. ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳ ಸಂದರ್ಭದಲ್ಲಿ ಏರ್ಪಾಟು.–** ಅಧ್ಯಕ್ಷರ ಸ್ಥಾನವು ಖಾಲಿ ಉಂಟಾದರೆ ಅಥವಾ ಯಾವುದೇ ಕಾರಣಕ್ಕೆ ಅಧ್ಯಕ್ಷರು ಗೈರುಹಾಜರಾದರೆ ಅಥವಾ ತಮ್ಮ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ, ಹೊಸ ಅಧ್ಯಕ್ಷರು ತಮ್ಮ ಸ್ಥಾನದ ಅಧಿಕಾರವನ್ನು ಸ್ವೀಕರಿಸುವ ತನಕ ಅಥವಾ ಸಂದರ್ಭಾನುಸಾರವಾಗಿ ಅಧ್ಯಕ್ಷರು ತಮ್ಮ ಅಧಿಕಾರ ಸ್ವೀಕರಿಸುವವರೆಗೂ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಅಂಥ ಸದಸ್ಯನು ಆ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**5. ಅಧ್ಯಕ್ಷರು ಮತ್ತು ಸದಸ್ಯರ ಇತರ ನಿಬಂಧನೆಗಳು ಮತ್ತು ಷರತ್ತುಗಳು.–** (1)ಅಧ್ಯಕ್ಷರು ಆಯೋಗದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಇಂತಹ ವಿಷಯಗಳಲ್ಲಿ ನಿರ್ಧಿಷ್ಟ ಉಪಬಂಧವನ್ನು ಈ ನಿಯಮಗಳಲ್ಲಿ ರಚಿಸಿದ ಹೊರತು ಆಯೋಗದಲ್ಲಿ ಉದ್ಭವಿಸುವ ಎಲ್ಲ ವಿವಾದಗಳು ಮತ್ತು ವಿಷಯಗಳ ಮೇಲೆ ನಿರ್ಣಯ ಕೈಗೊಳ್ಳುವ ಅಧಿಕಾರಗಳ ಉತ್ತರ ದಾಯತ್ವವನ್ನು ಹೊಂದಿರತಕ್ಕದ್ದು.

(2) ಅಧ್ಯಕ್ಷರು, ಸದಸ್ಯರ ರಜೆಯನ್ನು ಮಂಜೂರು ಮಾಡುವ ಮತ್ತು ಪ್ರವಾಸಗಳಿಗೆ ಅನುಮೋದನೆ ನೀಡುವಪ್ರಾಧಿಕಾರವಾಗಿರತಕ್ಕದ್ದು.

(3) ಅಧ್ಯಕ್ಷರು, ಆಯೋಗದ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಸದಸ್ಯರುಗಳಿಗೆ ಹಂಚಿಕೆಯಾದ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗದ ಎಲ್ಲ ಪ್ರಮುಖ ತೀರ್ಮಾನಗಳನ್ನು ಅಧ್ಯಕ್ಷರ ಅನುಮೋದನೆಯೊಂದಿಗೆ ತೆಗೆದುಕೊಳ್ಳತಕ್ಕದ್ದು.

(5) ಅಧ್ಯಕ್ಷರು, ತಾವು ಪ್ರಮುಖವೆಂದು ಪರಿಗಣಿಸುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಕೇಳಬಹುದು ಮತ್ತು ಈ ಬಗ್ಗೆ ಆಯೋಗದ ಸಭೆಗಳಲ್ಲಿ ಮಂಡಿಸಿ ತೀರ್ಮಾನವನ್ನು ಕೈಗೊಳ್ಳಬಹುದು.

**6. ಅಧ್ಯಕ್ಷರು ಆಯೋಗದ ಸದಸ್ಯರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.–**(1)ಆಯೋಗದ ಸದಸ್ಯರು ಆಯೋಗದ ಸಾಮೂಹಿಕ ಜವಾಬ್ದಾರಿಗಳನ್ನು ಹೊಂದಿರತಕ್ಕದ್ದು ಮತ್ತು ಆಯೋಗದ ಸಭೆಗಳಲ್ಲಿ ಮತ್ತು ಉಪವೇಶನಗಳಲ್ಲಿ ಭಾಗವಹಿಸುವ ಮತ್ತು ಹಾಜರಾಗುವ ಮೂಲಕ ಮತ್ತು ಅವರಿಗೆ ಹಂಚಿಕೆಯಾದ ವಿಷಯಗಳು ಅಥವಾ ಪ್ರದೇಶಗಳನ್ನು ಪರಿಶೀಲಿಸುವ ಮೂಲಕ ಕಾರ್ಯ ನಿರ್ವಹಿಸತಕ್ಕದ್ದು. ಸದಸ್ಯನು ಪ್ರಮುಖ ಕ್ರಮಗಳು ಮತ್ತು ತೀರ್ಮಾನವನ್ನು ಆಯೋಗದ ಸಭೆಯಲ್ಲಿ ಮಂಡಿಸಬಹುದು. ಆಯೋಗವು ಅದನ್ನು ಪುನರೀಕ್ಷಣೆ ಮಾಡಬಹುದು.

(2) ಯಾವೊಬ್ಬ ಸದಸ್ಯನು, ತನಗೆ ಹಂಚಿಕೆಯಾಗಬಹುದಾದ ವಿಷಯ ಅಥವಾ ಪ್ರದೇಶಗಳನ್ನು ಸೇರಿಸಲು ಬಾಬುಗಳ (items) ಮೂಲಕ ಸಲಹೆ ನೀಡಬಹುದು.

(3) ಪ್ರತಿಯೊಬ್ಬ ಸದಸ್ಯನು ತನಗೆ ಹಂಚಿಕೆಯಾಗಬಹುದಾದ ವಿಷಯ ಅಥವಾ ಪ್ರದೇಶಗಳ ಪೂರ್ಣ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

## ಅಧ್ಯಾಯ–III

**7. ಆಯೋಗದ ಸಿಬ್ಬಂದಿ.–** (1)ಆಯೋಗದ ಸಿಬ್ಬಂದಿಯ ಹುದ್ದೆಗಳನ್ನು ರಾಜ್ಯ ನಾಗರಿಕ ಸೇವೆಗಳು ಅಥವಾ ವಿಶ್ವವಿದ್ಯಾಲಯಗಳು ಅಥವಾ ಸ್ಥಳೀಯ ಪ್ರಾಧಿಕಾರಗಳು ಅಥವಾ ಸಾರ್ವಜನಿಕ ವಲಯ ಉದ್ಯಮಗಳ ಅಥವಾ ಶಾಸನಬದ್ಧ ಮಂಡಳಿಗಳು ಅಥವಾ ನಿಗಮಗಳು ಇವುಗಳಿಂದ ಸಮಾನ ವೇತನ ಶ್ರೇಣಿಗಳು ಮತ್ತು ದರ್ಜೆಯನ್ನು ಹೊಂದಿರುವ ಯಾವುದೇ ಅಧಿಕಾರಿಗಳು ಅಥವಾ ಸಿಬ್ಬಂದಿಯನ್ನು ನಿಯೋಜನೆ ಮಾಡುವ ಮೂಲಕ ಅಥವಾ ಮೇಲಿನ ಯಾವುದೇ ಸೇವೆಯಿಂದ ವಯೋನಿವೃತ್ತಿ ಹೊಂದಿರುವ ವ್ಯಕ್ತಿಗಳನ್ನು ಗುತ್ತಿಗೆಯ ಆಧಾರದ ಮೇಲೆ ನೇಮಕ ಮಾಡುವ ಮೂಲಕ ಭರ್ತಿಮಾಡಬಹುದು.

(2) ನಿಯೋಜನೆ ಮೇಲೆ ನೇಮಕಾತಿಗಳು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಳು ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಉಪಬಂಧಗಳ ಮತ್ತು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಯಾವುದೇ ಇತರ ಆದೇಶಗಳನ್ವಯವಾಗಿ ಇರತಕ್ಕದ್ದು.

(3) ಕಾರ್ಯದರ್ಶಿ, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಇವರು ಆಯೋಗದ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಸದಸ್ಯ ಕಾರ್ಯದರ್ಶಿಯು ಆಯೋಗದ ಆಡಳಿತಾತ್ಮಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಆಯೋಗದ ಸಿಬ್ಬಂದಿಯ ನೆರವಿನೊಂದಿಗೆ ಆಯೋಗವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ನೆರವಾಗತಕ್ಕದ್ದು.

(4) ಎಲ್ಲ ಪ್ರಮುಖ ಆಡಳಿತಾತ್ಮಕ ವಿಷಯಗಳನ್ನು ಸದಸ್ಯ ಕಾರ್ಯದರ್ಶಿಯ ಮುಂದೆ ಇಡತಕ್ಕದ್ದು. ಇವರು ಅಂತಹ ವಿಷಯಗಳ ಮೇಲೆ ಸಾಮಾನ್ಯ ಅಥವಾ ವಿಶೇಷ ಆದೇಶಗಳನ್ನು ಹೊರಡಿಸಬಹುದು.

(5) ಸದಸ್ಯ ಕಾರ್ಯದರ್ಶಿಯು ಆಯೋಗದ ಸಭೆಗಳಿಗಾಗಿ ಸೂಚಿಪಟ್ಟಿಯನ್ನು ತಯಾರಿಸುವ ಮತ್ತು ಸಂಕ್ಷಿಪ್ತ ವರದಿಯನ್ನು ಸುತ್ತಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(6) ಸದಸ್ಯ ಕಾರ್ಯದರ್ಶಿಯು ವರದಿಗಳನ್ನು ಅಂತಿಮಗೊಳಿಸಲು ಆಯೋಗಕ್ಕೆ ನೆರವು ನೀಡತಕ್ಕದ್ದು.

(7) ಸದಸ್ಯ–ಕಾರ್ಯದರ್ಶಿಯು ತನ್ನ ವಿವೇಚನೆಯ ಅನುಸಾರ, ಆಯೋಗದ ಅಧೀನ ಸಿಬ್ಬಂದಿಗೆ ತನ್ನ ಯಾವುದೇ ಪ್ರಕಾರ್ಯಗಳ ಅಥವಾ ಪ್ರಾಧಿಕಾರವನ್ನು ಪ್ರತ್ಯಾಯೋಜಿಸಬಹುದು.

## ಅಧ್ಯಾಯ –IV

**8. ಆಯೋಗದ ಸಭೆಗಳು.–** (1)ಆಯೋಗವು ಬೆಂಗಳೂರು ಅಥವಾ ಅವಶ್ಯವೆನಿಸಿದಾಗ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ರಾಜ್ಯದ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು, ಪರಂತು, ಆಯೋಗವು ತಿಂಗಳಲ್ಲಿ ಕನಿಷ್ಠ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

(2) ಆಯೋಗವು ತಾನು ಸೂಕ್ತ ಎಂದು ಭಾವಿಸಿದಾಗಲೆಲ್ಲಾ ತನ್ನದೇ ಕಾರ್ಯ ವಿಧಾನಗಳನ್ನು ವಿನಿಯಮಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ–ಕಾರ್ಯದರ್ಶಿಯು ಅಥವಾ ಈ ಸಂಬಂಧದಲ್ಲಿ ಯುಕ್ತವಾಗಿಸದಸ್ಯ–ಕಾರ್ಯದರ್ಶಿಯು ತನ್ನ ಪರವಾಗಿ ಅಧಿಕೃತಗೊಳಿಸಿದ ಆಯೋಗದ ಯಾವೊಬ್ಬ ಇತರ ಅಧಿಕಾರಿಯ ಮೂಲಕ ಅಧಿಪ್ರಮಾಣಗೊಳಿಸತಕ್ಕದ್ದು.

(4) ಅಧ್ಯಕ್ಷರು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಸಭೆ ನಡೆಸಲು ಉದ್ದೇಶಿಸಿರುವಾಗ ಕನಿಷ್ಠ ಮೂರು ಕೆಲಸದ ದಿನಗಳ ನೋಟೀಸನ್ನು ನೀಡತಕ್ಕದ್ದು ಮತ್ತು ಆಯೋಗದ ಸಭೆಗಳು ಬೆಂಗಳೂರಿನ ಹೊರ ಸ್ಥಳಗಳಲ್ಲಿ ನಡೆದರೆ ಕನಿಷ್ಠ ಏಳು ದಿನಗಳ ಮುಂಚಿತವಾಗಿ ಸದಸ್ಯರಿಗೆ ನೋಟೀಸನ್ನು ನೀಡತಕ್ಕದ್ದು. ಆಯೋಗವು ತುರ್ತಾಗಿ ಪರಿಗಣಿಸುವ ಪ್ರಮುಖ ವಿಷಯಗಳನ್ನು ವಿಲೆ ಮಾಡಲು ಅಧ್ಯಕ್ಷರು ಸ್ವತ: ಅಥವಾ ಸದಸ್ಯರ ಅಥವಾ ಸದಸ್ಯ ಕಾರ್ಯದರ್ಶಿಯವರ ಕೋರಿಕೆಯ ಮೇರೆಗೆ ತುರ್ತು ಸಭೆಗಳನ್ನುಸಹ ಕರೆಯಬಹುದು.

(5) ಆಯೋಗದ ಸಭೆಯ ಕೋರಂ ಅಧ್ಯಕ್ಷರೂ ಸೇರಿದಂತೆ ಎರಡು ಆಗಿರತಕ್ಕದ್ದು. ಪರಂತು ಹಾಗೆ ಗೊತ್ತುಪಡಿಸಿದ ಕೋರಂ ಆಯೋಗದಲ್ಲಿ ಖಾಲಿ ಸ್ಥಾನಗಳಿದ್ದಾಗ ಆಯೋಗದಲ್ಲಿರುವ ಅಂತಹ ಖಾಲಿ ಸ್ಥಾನಗಳ ಸಂಖ್ಯೆಯಷ್ಟು ಕಡಿಮೆಗೊಳಿಸತಕ್ಕದ್ದು.

(6) ಆಯೋಗದ ಪ್ರತಿಯೊಂದು ತೀರ್ಮಾನವು ಹಾಜರಿರುವ ಸದಸ್ಯರ ಬಹುಮತಕ್ಕೆ ಅನುಗುಣ ವಾಗಿರತಕ್ಕದ್ದು.

(7) ಆಯೋಗವು ವಿರುದ್ಧವಾದ ತೀರ್ಮಾನಗಳ ಸಂಬಂಧ, ಆಯೋಗದ ಸಭೆಯ ನಡವಳಿಯನ್ನು ಸದಸ್ಯ–ಕಾರ್ಯದರ್ಶಿಯು ದಾಖಲೆ ಮಾಡತಕ್ಕದ್ದು. ಮತ್ತು ಅವನು ಸದರಿ ನಡಾವಳಿಗಳ ಪ್ರತಿಗಳನ್ನು ತಯಾರಿಸತಕ್ಕದ್ದು. ಮತ್ತು ಅದನ್ನು ಸಭೆಯು ಮುಕ್ತಾಯವಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಧ್ಯಕ್ಷರು ಮತ್ತು ಸದಸ್ಯರಿಗೆ ತಿಳಿಸತಕ್ಕದ್ದು. ಅವನು ಮುಂದಿನ ಸಭೆಯಲ್ಲಿ ಅಧ್ಯಕ್ಷರ ಸಹಿಗಾಗಿ ನಡವಳಿಗಳನ್ನು ಹಾಜರುಪಡಿಸತಕ್ಕದ್ದು. ಅಧ್ಯಕ್ಷರು ಸಹಿ ಮಾಡಿದ ನಂತರ ಸಭೆಯ ನಡವಳಿಗಳು ಊರ್ಜಿತವಾಗತಕ್ಕದ್ದು.

(8) ಸಭೆಯ ನಡವಳಿಗಳನ್ನು ದಾಖಲಿಸಲು ಅದರ ಸರಿತನದ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದರೆ ಆಯೋಗದ ಮುಂದೆ ಸಭೆಯಲ್ಲಿ ಚರ್ಚೆ ಕೈಗೊಳ್ಳಬಹುದು. ಮತ್ತು ಆಯೋಗವು ಅದನ್ನು ತೀರ್ಮಾನಿಸತಕ್ಕದ್ದು.

(9) ಸದಸ್ಯ ಕಾರ್ಯದರ್ಶಿಯು ವ್ಯವಹಾರಗಳ ದಾಖಲೆಯನ್ನು ಇಟ್ಟುಕೊಳ್ಳತಕ್ಕದ್ದು. ಹಾಗೂ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಅವುಗಳ ಪ್ರಮಾಣೀಕರಿಸಿದ ಜೆರಾಕ್ಸ್ ಪ್ರತಿಯನ್ನು ಒದಗಿಸತಕ್ಕದ್ದು. ಅಧ್ಯಕ್ಷರು ತಮ್ಮ ವಿವೇಚಾನುಸಾರ ಆಯೋಗದ ಸಭೆಯ ಪೂರ್ಣ ವ್ಯವಹರಣೆಗಳನ್ನು ಪ್ರಕಟಿಸಲು ಲಿಖಿತದಲ್ಲಿ ಅಧಿಕೃತಗೊಳಿಸಿದ ಹೊರತು ಸಂಬಂಧಪಟ್ಟ ಎಲ್ಲರೂ ನಡಾವಳಿಗಳನ್ನು ರಹಸ್ಯವಾಗಿ ಇಟ್ಟಿರ ತಕ್ಕದ್ದು.

**9. ಆಯೋಗವು ತನ್ನ ಸಭೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳಬೇಕಾಗಿರುವ ವಿಷಯಗಳು.–** ಈ ಮುಂದಿನ ವಿಷಯಗಳನ್ನು, ಎಂದರೆ.–

(i) ಅಧಿನಿಯಮಕ್ಕೆ ಅಥವಾ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ಈ ನಿಯಮಗಳಿಗೆ ತಿದ್ದುಪಡಿಗಾಗಿ ಯಾವುದೇ ಶಿಫಾರಸ್ಸು;

(ii) ಆಯೋಗವು ನೇರವಾಗಿ ತನಿಖೆ ಮಾಡಬೇಕಾದ ಅಥವಾ ವಿಚಾರಣೆ ಮಾಡಬೇಕಾದ ವಿಷಯಗಳು;

(iii) ಅಧ್ಯಕ್ಷರ ಅನುಮೋದನೆಯೊಂದಿಗೆ, ಸದಸ್ಯನು ಸಭೆಯ ಮುಂದೆ ತರಬೇಕೆಂದು ಇಚ್ಛಿಸುವ ಎಲ್ಲಾ ವರದಿಗಳು.

(iv) ಅಧ್ಯಕ್ಷರ ಅನುಮತಿಯೊಂದಿಗೆ, ಸದಸ್ಯನು ಸಭೆ ಮುಂದೆ ಮಂಡಿಸಲು ಇಚ್ಛಿಸಿದ ಯಾವುದೇ ವಿಷಯಗಳು;

(v) ಅಧ್ಯಕ್ಷರು ಆಯೋಗದ ಸಭೆಯಲ್ಲಿ ಮಂಡಿಸಬೇಕೆಂದು ನಿರ್ದೇಶಿಸಬಹುದಾದಂತಹ ಯಾವುದೇ ವಿಷಯ.

– ಇವುಗಳನ್ನು ಆಯೋಗದ ಸಭೆಯ ಮುಂದೆ ಅವುಗಳನ್ನು ಪರಿಗಣಿಸಲು ಮತ್ತು ತೀರ್ಮಾನವನ್ನು ತೆಗೆದುಕೊಳ್ಳಲು ಮಂಡಿಸತಕ್ಕದ್ದು;

**10. ಸಭೆಯ ಕಾರ್ಯಸೂಚಿ.–** ಕಾರ್ಯಸೂಚಿಯನ್ನು ಸಾಮಾನ್ಯವಾಗಿ ಸಭೆಯ ಮೊದಲು ಕನಿಷ್ಠ ಮೂರು ದಿನಗಳ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ರವಾನಿಸತಕ್ಕದ್ದು.ಪರಂತು, ತುರ್ತು ಸಭೆಗೆ ಕಾಲಮಿತಿಯು ಅನ್ವಯವಾಗುವುದಿಲ್ಲ. ಸಭೆಯ ನಡವಳಿಗಳನ್ನು ಸಾಧ್ಯವಾದಷ್ಟು ಬೇಗನೆ ಎಲ್ಲಾ ಸದಸ್ಯರಿಗೆ ರವಾನಿಸತಕ್ಕದ್ದು.

## ಅಧ್ಯಾಯ –V

**11.ಆಯೋಗದಿಂದ ತನಿಖೆ ಹಾಗೂ ವಿಚಾರಣೆ.–**(1)ಆಯೋಗವು ಸಫಾಯಿ ಕರ್ಮಚಾರಿಗಳ ರಕ್ಷಣೆ, ಕ್ಷೇಮಾಭಿವೃದ್ಧಿ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ತನಿಖೆ ಮಾಡಲು ಅಥವಾ ಆಯೋಗವು ನೇರವಾಗಿ ತನಿಖೆ ಅಥವಾ ವಿಚಾರಣೆ ನಡೆಸಲು ತೀರ್ಮಾನಿಸಿದೆಯೋ ಆ ನಿರ್ದಿಷ್ಟ ದೂರುಗಳ ವಿಚಾರಣೆಗಾಗಿ ಸಭೆಗಳನ್ನು ನಡೆಸಬಹುದು. ಅಂತಹ ಉಪವೇಶನಗಳನ್ನು ಆಯೋಗದ ಕೇಂದ್ರ ಸ್ಥಳದಲ್ಲಾಗಲಿ ಅಥವಾ ರಾಜ್ಯದ ಯಾವುದೇ ಇತರ ಸ್ಥಳದಲ್ಲಾಗಲಿ ನಡೆಸಬಹುದು.

(2)ಆಯೋಗದ ಸಭೆಗಳನ್ನು ವಿಚಾರಣೆ ನಡೆಸಲು ಉದ್ದೇಶಿಸಿದ ಪಕ್ಷಕಾರರಿಗೆ ಯುಕ್ತ ನೋಟೀಸನ್ನು ನೀಡಿದ ನಂತರ ನಡೆಸತಕ್ಕದ್ದು, ಅಗತ್ಯವಿದ್ದರೆ ಸಾರ್ವಜನಿಕರಿಗೆ ಮುಂಚಿತವಾಗಿ ಪ್ರಚಾರದ ನೋಟೀಸನ್ನು ನೀಡತಕ್ಕದ್ದು. ನೋಟೀಸು ಅಥವಾ ಸಂದರ್ಭಾನುಸಾರವಾಗಿ ಮುಂಚಿತವಾಗಿ ಮಾಹಿತಿ ನೀಡಿ ತನಿಖೆ ಅಥವಾ ವಿಚಾರಣೆ ಮೇರೆಗಿನ ವಿಷಯಗಳಲ್ಲಿ ಭಾದಿತವಾಗಿರುವಂತ ಸಫಾಯಿ ಕರ್ಮಚಾರಿಗಳ ಸದಸ್ಯರ ಬಗ್ಗೆ ಎಚ್ಚರಿಕೆ ವಹಿಸತಕ್ಕದ್ದು.

(3) ತನಿಖೆ ಅಥವಾ ವಿಚಾರಣೆಯು ನಡೆಯುವ ಅವಧಿಯಲ್ಲಿ ಆಯೋಗವು ಪ್ರಮಾಣವಚನ ಅಥವಾ ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯಬಹುದು. ಆಯೋಗವು ಅವಶ್ಯವೆಂದು ಪರಿಗಣಿಸಿದರೆ, ತನಿಖೆ ಅಥವಾ ವಿಚಾರಣೆಯಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಅವಶ್ಯವೆಂದು ಪರಿಗಣಿಸುವ ಯಾವೊಬ್ಬ ವ್ಯಕ್ತಿಯ ಖುದ್ದು ಹಾಜರಿಯನ್ನು ಅಗತ್ಯಪಡಿಸಬಹುದು ಮತ್ತು ಅವನಿಗೆ ಸಮನ್‌ಗಳನ್ನು ಜಾರಿಗೊಳಿಸಬಹುದು. ಸಮನ್‌ಗಳನ್ನು ಸ್ವೀಕರಿಸಿದ ದಿನಾಂಕದಿಂದ ಆಯೋಗದ ಮುಂದೆ ಹಾಜರಾಗಬೇಕೆಂದು ನಿರ್ದೇಶಿಸಿದ ವ್ಯಕ್ತಿಗೆ ಕನಿಷ್ಠ ಏಳು ದಿನಗಳ ನೋಟೀಸಿನ ಸಮನ್‌ಗಳನ್ನು ಒದಗಿಸತಕ್ಕದ್ದು.

(4) ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ವಿಷಯಗಳಾದ ಸ್ವತ್ತು, ಸೇವೆ ಅಥವಾ ಉದ್ಯೋಗದ ಸಂಬಂಧ ತುರ್ತು ಬೆದರಿಕೆ ಇರುವಾಗ ಮತ್ತು ಆಯೋಗವು ವಿವಾದಾಂಶವನ್ನು ಕೈಗೊಂಡಿದೆ ಎಂದು ಅವರಿಗೆ ತಿಳಿಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಫ್ಯಾಕ್ಸ್ ಅಥವಾ ಇ–ಮೇಲ್ ಮೂಲಕ ಸೂಚನೆ ನೀಡಿ, ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದು. ಫ್ಯಾಕ್ಸ್ ಅಥವಾ ಇ–ಮೇಲ್ ತುರ್ತು ಪ್ರತ್ಯುತ್ತರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ತರಿಸಿಕೊಳ್ಳತಕ್ಕದ್ದು. ಒಂದು ವಾರದೊಳಗೆ ಪತ್ರ ವನ್ನು ಸ್ವೀಕರಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಪ್ರಾಧಿಕಾರವು ವಿಚಾರಣೆಗಾಗಿ ಶೀಘ್ರ ನೋಟೀಸಿ ನಲ್ಲಿ ಸಮನ್ ನೀಡತಕ್ಕದ್ದು.

(5) ಆಯೋಗವು ಅಗತ್ಯ ಸಭೆಗಳನ್ನು ನಡೆಸತಕ್ಕದ್ದು ಮತ್ತು ತನಿಖೆಯನ್ನು ನಡೆಸತಕ್ಕದ್ದು. ವಾಸ್ತವಾಂಶಗಳ ಮತ್ತು ಸಾಕ್ಷ್ಯಗಳ ಸಂಗ್ರಹಣ ನೋಟೀಸು, ವಿಚಾರಣಾ ನೋಟೀಸು ಮತ್ತು ಸಾರ್ವಜನಿಕ ನೋಟೀಸು ಕ್ರಮವಾಗಿ ನಮೂನೆ I,II ಮತ್ತು III ರಲ್ಲಿ ಇರತಕ್ಕದ್ದು.

**12. ಕೆಲವು ದಾಖಲೆಗಳನ್ನು ರಹಸ್ಯವಾಗಿಡುವುದು.–** ಆಯೋಗವು ಸಭೆಗಳಲ್ಲಿ ಅಥವಾ ಅನ್ಯಥಾ ತೀರ್ಮಾನಗಳ ಮೂಲಕ ಯಾವುದೇ ವಿಷಯದ ಮೇಲೆ ಮಾಡಲಾದ ಯಾವುದೇ ವರದಿಯ ಒಳಾಂಶಗಳನ್ನು ರಹಸ್ಯವಾಗಿ ಇಟ್ಟುಕೊಳ್ಳತಕ್ಕದ್ದು. ಮತ್ತು ಅಂಥ ವರದಿಯ ಸಂಬಂಧ ಅಧಿಕೃತಗೊಳಿಸಲಾದ ವ್ಯಕ್ತಿಯ ಹೊರತಾಗಿ ಯಾವುದೇ ವ್ಯಕ್ತಿಗೆ ಬಹಿರಂಗ ಪಡಿಸಬಾರದೆಂದು ನಿರ್ದೇಶಿಸಬಹುದು.

**13.ಕಾನೂನು ಕ್ರಮಗಳು.–** ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವ ಅನುಸರಣೆಯಲ್ಲಿ ಜಾರಿಗೊಳಿಸಲು ಅಗತ್ಯ ಪಡಿಸಿದಂಥ ಎಲ್ಲಾ ಸಮನ್‌ಗಳು ಹಾಗೂ ವಾರಂಟ್‌ಗಳನ್ನುನಿಯಮಿಸಲಾದ ನಮೂನೆಯಲ್ಲಿ ಬರೆದಿರತಕ್ಕದ್ದು. ಹಾಗೂ ಆಯೋಗದ ಮೊಹರನ್ನು ಹೊಂದಿರತಕ್ಕದ್ದು. ಕಾನೂನು ಕ್ರಮಗಳ ಜಾರಿಗಾಗಿ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯ ಸಂಹಿತೆಯ ಉಪಬಂಧಗಳನ್ನು ಆಯೋಗವು ಪಾಲಿಸತಕ್ಕದ್ದು.

**14.ಸಮನ್‌ಗಳು ಹಾಗೂ ವಾರಂಟ್‌ಗಳ ನಮೂನೆ.–** ಸಮನ್‌ಗಳು ಹಾಗೂ ವಾರಂಟ್‌ಗಳು ಅನುಕ್ರಮವಾಗಿ ನಮೂನೆ IVಮತ್ತು Vರಲ್ಲಿ ಇರತಕ್ಕದ್ದು.

**15.ಪತ್ರಗಳು ಹಾಗೂ ನೋಟೀಸ್‌ಗಳ ಜಾರಿ.–** ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸದೆ ಜಾರಿಗೊಳಿಸಬೇಕಾದಂಥ ದಾಸ್ತಾವೇಜುಗಳು ಇತ್ಯಾದಿಗಳ ಸಲ್ಲಿಕೆಗೆ ಅಗತ್ಯವಾದ ಪತ್ರಗಳು ಹಾಗೂ ನೋಟೀಸುಗಳನ್ನು ಆಯೋಗವು ಒದಗಿಸಬಹುದು. ಹಾಗೂ ಸದಸ್ಯ–ಕಾರ್ಯದರ್ಶಿ ಅಥವಾ ಅಧಿಕೃತಗೊಳಿಸಲಾದ ಅಧಿಕಾರಿಯು ಸಹಿ ಮಾಡಿರತಕ್ಕದ್ದು.

## ಅಧ್ಯಾಯ –VI

**16. ಆಯೋಗದ ಸಭೆಗಳು.–**(1)ಒಂದು ವಿಷಯವನ್ನು ಆಯೋಗವು ನೇರವಾಗಿ ತನಿಖೆ ಅಥವಾ ವಿಚಾರಣೆ ಮಾಡಬೇಕಾದಾಗ ಆಯೋಗದ ಸಭೆಗಳನ್ನು ನಡೆಸುವ ಮೂಲಕ ಹಾಗೆ ಮಾಡಬಹುದು.

(2) **ಹಾಜರಿರಬೇಕಾದ ಅಧಿಕಾರಿಗಳು,–** ಒಬ್ಬ ಸದಸ್ಯನು ಸಭೆಯನ್ನು ನಡೆಸುವಾಗ, ಆಯೋಗದ ಅಧಿಕೃತ ಅಧಿಕಾರಿ ಅಥವಾ ಸದಸ್ಯ–ಕಾರ್ಯದರ್ಶಿಯು ಪ್ರಕಾರ್ಯಗಳನ್ನು ಯುಕ್ತವಾಗಿ ಹಾಗೂ ಪ್ರಾಮಾಣಿಕವಾಗಿ ಸಭೆಯನ್ನು ನಡೆಸುವ ಸದಸ್ಯರಿಗೆ ನೆರವಾಗಲು ಹಾಜರಿರತಕ್ಕದ್ದು. ಸದಸ್ಯರು ವರದಿಯನ್ನು ಸಿದ್ಧಪಡಿಸಲು ಕೋರಿದರೆ ಅದನ್ನು ಸಿದ್ಧಪಡಿಸಲು ಸದಸ್ಯರುಗಳಿಗೆ ನೆರವಾಗುವುದು ಅಧಿಕೃತ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು. ಕಾರ್ಯ ವಿಧಾನಗಳನ್ನು ಅನುಸರಿಸಲು ಸದಸ್ಯ(ರು)ಗೆ ನೆರವಾಗುವುದಕ್ಕೆ ಸಹ ಅಧಿಕಾರಿಯು ಜವಾಬ್ದಾರನಾಗಿರತಕ್ಕದ್ದು;

(3) **ಸಭೆಗಳ ಸಂಖ್ಯೆ.–**ಆಯೋಗದ ಸಭೆಗಳನ್ನು ಅಗತ್ಯವಿದ್ದಾಗಲೆಲ್ಲಾ ನಡೆಸಬಹುದು. ಆಯೋಗವು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುವ ವಿವಿಧ ಸದಸ್ಯರುಗಳೊಂದಿಗೆ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಸಭೆಗಳನ್ನು ನಡೆಸಬಹುದು.

(4) **ಸಭೆಗಳ ಕಾರ್ಯಕ್ರಮ,–** ಸಭೆಗಳ ಕಾರ್ಯಕ್ರಮವನ್ನು ಕೇಂದ್ರ ಕಛೇರಿಗಳು ಹಾಗೂ ಇತರ ಸ್ಥಳಗಳೆರಡು ಕಡೆಗಳಲ್ಲಿ ಸಾಮಾನ್ಯವಾಗಿ ಮುಂಚಿತವಾಗಿ ಮತ್ತು ಯುಕ್ತವಾಗಿ ತಿಳಿಸಿ ಪ್ರತಿ ತಿಂಗಳು ನಡೆಸಬಹುದು.

**(5) ಸಾಕ್ಷಿದಾರರಿಗೆ ವೆಚ್ಚಗಳನ್ನು ಭರಿಸುವುದು:–** (ಎ) ಸಭೆಯಲ್ಲಿ ಆಯೋಗದ ಮುಂದೆ ಹಾಜರಾಗಲು ಸಮನ್‌ಗಳ ಮೂಲಕ ಕರೆಯಲಾದಂಥ ವ್ಯಕ್ತಿಗಳಿಗೆ ಪ್ರಯಾಣ ವೆಚ್ಚಗಳನ್ನು ಆಯೋಗವು ಭರಿಸತಕ್ಕದ್ದು:

ಪರಂತು, ವ್ಯಕ್ತಿಯ ವಾಸ–ಸ್ಥಳವು ಆಯೋಗದ ಸಭೆಯ ಸ್ಥಳದಿಂದ 8 ಕಿ.ಮೀ. ಗಳಿಗಿಂತ ಹೆಚ್ಚಾಗಿರಬೇಕು. ಹಾಗೆ ಭರಿಸಲಾದ ಮೊತ್ತವು ವ್ಯಕ್ತಿಯು ಯಾವುದೇ ಇತರ ಮೂಲದಿಂದ ಪ್ರಯಾಣ ಮತ್ತು ದಿನಭತ್ಯಕ್ಕೆ ಹಕ್ಕುಳ್ಳವನಾಗಿಲ್ಲದಿದ್ದರೆ ವಾಸ್ತವಿಕ ಪ್ರಯಾಣವೆಚ್ಚಗಳು ಹಾಗೂ ವ್ಯಕ್ತಿಯು ಆಯೋಗದ ಸಭೆಯಲ್ಲಿ ಹಾಜರಾಗಿದ್ದ ದಿನಗಳ ಸಂಖ್ಯೆಗನುಗುಣವಾಗಿ ದಿನಭತ್ಯೆಗೆ ಒಳಪಟ್ಟಿರತಕ್ಕದ್ದು. ಪ್ರಯಾಣ ವೆಚ್ಚಗಳ ಮಿತಿಯು ಆಯೋಗವು ನಿರ್ಧಿಷ್ಟ ಪಡಿಸಬಹುದಾದ ದರಗಳ ಆಧಾರದ ಮೇಲೆ ಲೆಕ್ಕ ಹಾಕಲಾದ ರೈಲು ದರ ಹಾಗೂ ರಸ್ತೆಯ ದೂರದ ಆಧಾರದ ಮೇಲೆ ನಿರ್ಧರಿಸತಕ್ಕದ್ದು. ವ್ಯಕ್ತಿಗಳ ಅರ್ಹತೆಯ ಬಗ್ಗೆ ಯಾವುದೇ ಸಂದೇಹಗಳು ಇದ್ದ ಸಂದರ್ಭದಲ್ಲಿ, ಆಯೋಗದ ಸದಸ್ಯ ಕಾರ್ಯದರ್ಶಿಯ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಬಿ) ಸರ್ಕಾರಿ/ಸಾರ್ವಜನಿಕ ವಲಯ ಉದ್ದಿಮೆ ನೌಕರರಾಗಿರುವ ವ್ಯಕ್ತಿಗಳನ್ನು ಆಯೋಗದ ಮುಂದೆ ಹೇಳಿಕೆ ನೀಡಲು ಅಥವಾ ದಾಖಲೆಗಳನ್ನು ಹಾಜರುಪಡಿಸಲು ಸಮನ್ ಮಾಡಿದ್ದರೆ, ಅದನ್ನು ಕರ್ತವ್ಯದ ಮೇಲೆ ಎಂಬುದಾಗಿ ಭಾವಿಸತಕ್ಕದ್ದು;

(ಸಿ) ಆಯೋಗದ ಸದಸ್ಯ ಕಾರ್ಯದರ್ಶಿಯು ಹಾಗೆ ಹಾಜರಾಗುವ ಸಂಬಂಧಪಟ್ಟ ವ್ಯಕ್ತಿಗಳಿಗೆ ಮೇಲಿನಂತೆ ಪಾವತಿ ಮಾಡುವ ಅಂಥ ಕ್ಲೇಮುಗಳ ಪಾವತಿಯನ್ನೂ ಖಚಿತಗೊಳಿಸಲು ಸೂಕ್ತ ವಿಧಾನವನ್ನು ರೂಪಿಸಬಹುದು;

(ಡಿ) ಮೇಲಿನಂತೆ ಪ್ರಯಾಣ ವೆಚ್ಚಗಳಿಗಾಗಿ ಕ್ಲೇಮು, ವ್ಯಕ್ತಿಯು ಸ್ವಂತ ಒಪ್ಪಿಗೆಯ ಮೇಲೆ ಮಾಡುವ ಯಾವುದೇ ತನಿಖೆ ಅಥವಾ ವಿಚಾರಣೆಯಲ್ಲಿ ಅಥವಾ ಆಯೋಗವು ಸಮನ್ ಜಾರಿಗೊಳಿಸಿರದ ಸೂಚನೆ ಅಥವಾ ನೋಟೀಸಿಗಾಗಿ ಆಯೋಗದ ಮುಂದೆ ಹಾಜರಾಗುವಂಥ ವ್ಯಕ್ತಿಯ ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ –VII

**17. ಆಯೋಗದ ಸಲಹಾ ಕಾರ್ಯ.–** ಆಯೋಗವು ತನ್ನ ಸದಸ್ಯ ಕಾರ್ಯದರ್ಶಿಯವರ ಮೂಲಕ ಸಭೆಗಳು,ವೈಯಕ್ತಿಕ ಸಂಪರ್ಕಗಳು, ಭೇಟಿಗಳು ಹಾಗೂ ಪತ್ರ ವ್ಯವಹಾರಗಳ ಮುಖಾಂತರ ರಾಜ್ಯ ಸರ್ಕಾರಿ ಇಲಾಖೆಗಳು ಅಥವಾ ಇತರ ಸಂಸ್ಥೆಗಳೊಂದಿಗೆ ಪರಸ್ಪರ ಕಾರ್ಯ ನಿರ್ವಹಿಸತಕ್ಕದ್ದು. ಈ ಸಂಬಂಧದಲ್ಲಿ ಮಾಹಿತಿಯನ್ನು, ಸಾಕಷ್ಟು ಮುಂಚಿತವಾಗಿ ಸಂಬಂಧಪಟ್ಟ ಇಲಾಖೆ ಅಥವಾ ಸಂಸ್ಥೆಗಳಿಗೆ ಕಳುಹಿಸಬಹುದು.

## ಅಧ್ಯಾಯ –VIII

**18. ಆಯೋಗದ ಕಾರ್ಯಗಳ ಮೇಲ್ವಿಚಾರಣೆ.–** ಆಯೋಗವು ಕಾಲಕಾಲಕ್ಕೆ ಸಫಾಯಿ ಕರ್ಮಚಾರಿಗಳಿಗಾಗಿ ಉಪಬಂಧಿಸಲಾದ ಸುರಕ್ಷತೆಗಳು ಹಾಗೂ ಇತರ ಸಾಮಾಜಿಕ, ಆರ್ಥಿಕ ಪ್ರಗತಿಪರ ಕ್ರಮಗಳಿಗೆ ಸಂಬಂಧಪಟ್ಟಂತೆ ತಾನು ಮೇಲ್ವಿಚಾರಣೆ ಮಾಡುವ ವಿಷಯಗಳು ಅಥವಾ ಸಂಗತಿಗಳು ಮತ್ತು ಪ್ರದೇಶಗಳನ್ನು ನಿರ್ವಹಣೆ ಮಾಡಬಹುದು.

**19. ವಿವರ ಪಟ್ಟಿಗಳು ಹಾಗೂ ವರದಿಗಳು.–** (1)ಆಯೋಗವು ಮೇಲ್ವಿಚಾರಣೆ ಮಾಡಬೇಕಾದಂಥ ವಿಷಯದ ನಿಯಂತ್ರಣದ ಜವಾಬ್ದಾರಿ ಹೊಂದಿರುವ ಯಾವುದೇ ಪ್ರಾಧಿಕಾರವು ಆಯೋಗವು ಅಗತ್ಯಪಡಿಸಿದಂತೆ ವರದಿಗಳನ್ನು ಒದಗಿಸತಕ್ಕದ್ದು.

(2) ಆಯೋಗವು ಕಾಲ–ಕಾಲಕ್ಕೆ ಸಫಾಯಿ ಕರ್ಮಚಾರಿಗಳಿಗಾಗಿ ಇರುವ ಸುರಕ್ಷತಾ ಕಾರ್ಯಗಳ ಅನುಷ್ಠಾನ ಪ್ರಭಾರ ಹೊಂದಿರುವಂಥ ರಾಜ್ಯ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ನಿಗಮಗಳು ಅಥವಾ ಇತರ ಪ್ರಾಧಿಕಾರಗಳಿಂದ ಯಾವುದೇ ನಿರ್ದಿಷ್ಟ ವಿಷಯ ಅಥವಾ ಸಂಗತಿಯ ಬಗ್ಗೆ ಮಾಹಿತಿ ಹಾಗೂ ವಿವರವನ್ನು ಒದಗಿಸಲು ಸೂಚನೆಗಳನ್ನು ಹೊರಡಿಸಬಹುದು.

**20. ಅನುಸರಣಾ ಕ್ರಮ.–**(1)ಮೇಲ್ವಿಚಾರಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡುವ ಸಲುವಾಗಿ ಆಯೋಗವು ಮಾಹಿತಿಯನ್ನು ಪಡೆದುಕೊಂಡ ನಂತರ ಸಾಧ್ಯವಾದಷ್ಟು ಬೇಗನೆ ನಿರ್ಣಯವನ್ನು ತೆಗೆದುಕೊಂಡ ಮೇಲೆ ರಕ್ಷಣಾ ಕಾರ್ಯಗಳ ಅನುಷ್ಠಾನದಲ್ಲಿ ಗಮನಿಸಿದಂಥ ನ್ಯೂನ್ಯತೆಗಳನ್ನು ವಿವರಿಸಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ವಿಷಯಗಳನ್ನು ತಿಳಿಸತಕ್ಕದ್ದು. ಹಾಗೂ ಅವಶ್ಯಕ ಸರಿಯಾದ ಕ್ರಮಗಳ ಬಗ್ಗೆ ಸಲಹೆ ನೀಡತಕ್ಕದ್ದು;

(2)ಆಯೋಗವು (1)ನೇ ಉಪನಿಯಮದ ಅಡಿಯಲ್ಲಿ ಕಳುಹಿಸಿದ ವಿಷಯಾನುಸಾರ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಅಭಿಪ್ರಾಯಗಳನ್ನು ಕೋರಬಹುದು;

(3) ಆಯೋಗವು ಸಂವಿಧಾನದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ರಾಜ್ಯ ಸರ್ಕಾರದ ಯಾವುದೇ ಆದೇಶದ ಮೇರೆಗೆ ಸಫಾಯಿ ಕರ್ಮಚಾರಿಗಳಿಗಾಗಿ ಇರುವ ರಕ್ಷಣಾ ಕ್ರಮಗಳು ಹಾಗೂ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕ್ರಮಗಳಿಗೆ ಸಂಬಂಧಪಟ್ಟ ವಿಷಯಗಳ ಮೇಲ್ವಿಚಾರಣಾ ಕಾರ್ಯ ವಿಧಾನದ ಮೂಲಕ ಅಭಿಪ್ರಾಯಪಟ್ಟ ತಜ್ಞ ತೀರ್ಮಾನಗಳು ಮತ್ತು ಗೊತ್ತುವಳಿಗಳನ್ನು ತನ್ನ ವಾರ್ಷಿಕ ವರದಿ ಅಥವಾ ಯಾವುದೇ ವಿಶೇಷ ವರದಿಯಲ್ಲಿ ಸೇರಿಸಬಹುದು.

## ಅಧ್ಯಾಯ –IX

**21. ಆಯೋಗದಿಂದ ಅನೌಪಚಾರಿಕ ಕ್ರಮಗಳು.–** ಆಯೋಗವು ಕಾನೂನಿನ ಮೇರೆಗೆ ಸ್ಪಷ್ಟವಾಗಿ ಉಲ್ಲೇಖಿಸಿರದಂಥ ವಿಷಯಗಳು ಅಥವಾ ಪ್ರಕರಣಗಳ ಅಥವಾ ವಿಶೇಷ ಪ್ರಕರಣಗಳಲ್ಲಿ ಅಂದರೆ ಸಫಾಯಿ ಕರ್ಮಚಾರಿ ಅಥವಾ ಸಫಾಯಿ ಕರ್ಮಚಾರಿ ಸಮೂಹದ ಕ್ಷೇಮಾಭಿವೃದ್ಧಿಯಂಥ ವಿಷಯವಾಗಿದ್ದರೆ ಪತ್ರ ವ್ಯವಹಾರವನ್ನು ಆರಂಭಿಸಬಹುದು ಹಾಗೂ ಈ ವರ್ಗಗಳ ವ್ಯಕ್ತಿಗಳ ಹಿತಾಸಕ್ತಿಯನ್ನು ರಕ್ಷಿಸುವಂಥ ತನ್ನ ಅಂತರ್ಗತ ಸಾಮರ್ಥ್ಯದಲ್ಲಿ ಆಯೋಗಕ್ಕೆ ಅಗತ್ಯವಾಗಿದ್ದರೆ ಕ್ರಮ ಕೈಗೊಳ್ಳಬಹುದು. ಆಯೋಗದಿಂದ ಬರುವ ಎಲ್ಲಾ ನಿಯತ ಔಪಚಾರಿಕ ಪತ್ರ ವ್ಯವಹಾರಗಳನ್ನು ಸದಸ್ಯ ಕಾರ್ಯದರ್ಶಿಯ ಅಥವಾ ಅಧಿಕೃತ ಅಧಿಕಾರಿಯ ಸಹಿಗಳಿಂದ ಹೊರಡಿಸತಕ್ಕದ್ದು. ಆಯೋಗವು, ತನ್ನ ಸದಸ್ಯ ಕಾರ್ಯದರ್ಶಿಯ ಮೂಲಕ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಿಸಬಹುದು.

**22. ರಾಜ್ಯ ಸರ್ಕಾರದ ನಿಯಮಗಳು, ಇತ್ಯಾದಿಗಳ ಅನ್ವಯಿಸುವಿಕೆ.–** (1) ರಾಜ್ಯ ಸರ್ಕಾರವು ಶಿಸ್ತು ಕ್ರಮಗಳ ಬಗ್ಗೆ ಹೊರಡಿಸಿದ ಎಲ್ಲಾ ನಿಯಮಗಳು, ವಿನಿಮಯಗಳು ಹಾಗೂ ಆದೇಶಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಆಯೋಗದ ಸಿಬ್ಬಂದಿ/ನೌಕರರಿಗೆ ಸಹ ಅನ್ವಯಿಸತಕ್ಕದ್ದು;

(2)ರಾಜ್ಯ ಸರ್ಕಾರದ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆಗೆ ಸಂಬಂಧಿಸಿದ ಉಪಬಂಧಗಳನ್ನು ಆಯೋಗದಲ್ಲಿನ ಸಂವಾದಿ ಅಧಿಕಾರಿಗಳಿಗೆ ಅನ್ವಯಿಸತಕ್ಕದ್ದು.

**23. ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿಲ್ಲದ ವಿಷಯಗಳ ಬಗ್ಗೆ ತೀರ್ಮಾನ.–**ಉಪಬಂಧವನ್ನು ಕಲ್ಪಿಸಿರದಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಯು ಉದ್ಭವಿಸಿದರೆ, ಅಧ್ಯಕ್ಷರ ತೀರ್ಮಾನವನ್ನು ಕೋರತಕ್ಕದ್ದು. ಅಧ್ಯಕ್ಷರು ಸೂಕ್ತವೆಂದು ಭಾವಿಸಿದರೆ, ವಿಷಯವನ್ನು ಆಯೋಗದ ಸಭೆಯಲ್ಲಿ ಪರಿಗಣಿಸಬಹುದೆಂದು ನಿರ್ದೇಶಿಸಬಹುದು.

## ಅಧ್ಯಾಯ –X

**24. ಮೌಲ್ಯಮಾಪನ ಮತ್ತು ಅಧ್ಯಯನಗಳು.–** (1)ಆಯೋಗವು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಸರ್ಕಾರದಲ್ಲಿ ಸರಕುಗಳು ಮತ್ತು ಸೇವೆಗಳನ್ನು ಪಡೆಯುವುದಕ್ಕಾಗಿ ನಿಯಮಿಸಲಾದಂಥ ವಿಧಾನದಲ್ಲಿ ಈ ಸಂಬಂಧದಲ್ಲಿ ಹೊರಡಿಸಲಾದ ನಿರ್ಣಯಗಳ ಮೂಲಕ ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳ ಸೌಲಭ್ಯಕ್ಕೆ ಯಾವುದೇ ಮೌಲ್ಯಮಾಪನ ಹಾಗೂ ಅಧ್ಯಯನಗಳನ್ನು ಕೈಗೊಳ್ಳಬಹುದು.

(2)ಅಂಥ ಪ್ರತಿಯೊಂದು ಮೌಲ್ಯಮಾಪನ ಹಾಗೂ ಅಧ್ಯಯನಗಳ ತರುವಾಯ ವರದಿಯೊಂದನ್ನು ಆಯೋಗದ ಮುಂದೆ ಮಂಡಿಸತಕ್ಕದ್ದು ಹಾಗೂ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮವನ್ನು ಕೈಗೊಳ್ಳಬಹುದು ಅಥವಾ ಯುಕ್ತ ಕ್ರಮಕ್ಕೆ ಅಧ್ಯಯನದ ವರದಿಯ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಬಹುದು.

## ಅಧ್ಯಾಯ –XI

**25. ಆಯೋಗದ ಲೆಕ್ಕಪತ್ರ.–** ಆಯೋಗದ ಬಜೆಟ್–ಅನ್ನು ಪ್ರತಿ ವರ್ಷದ 30ನೇ ನವೆಂಬರ್ ಮಾಹೆಗೆ ಮೊದಲೇ ತಯಾರಿಸತಕ್ಕದ್ದು ಹಾಗೂ ಪ್ರತಿ ವರ್ಷದ ಡಿಸೆಂಬರ್‌ನ ಮೊದಲ ವಾರದ ಅವಧಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ದ್ವಿ–ಪ್ರತಿಯಲ್ಲಿ ಸಲ್ಲಿಸತಕ್ಕದ್ದು.

**26. ಆಯೋಗದ ಆಯವ್ಯಯದ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** ಆಯೋಗವು ಲೆಕ್ಕಪತ್ರವನ್ನು ಈ ಕೆಳಕಂಡಂತೆ ನಿರ್ವಹಿಸತಕ್ಕದ್ದು, ಎಂದರೆ:–

(1) ಆಯವ್ಯಯದ ಅನುದಾನಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಪಟ್ಟಂಥ ಲೆಕ್ಕಪತ್ರಗಳ ವಿವರಣಾ ಪಟ್ಟಿ ಹಾಗೂ ಆಯ–ವ್ಯಯದ ಅನುದಾನಗಳ ಸಂಬಂಧದಲ್ಲಿನ ವೆಚ್ಚದ ಲೆಕ್ಕಪತ್ರಗಳ ವಿವರಣಾ ಪಟ್ಟಿ ಹಾಗೂ ಆಯೋಗದ ಎಲ್ಲಾ ಲೆಕ್ಕ ಪತ್ರಗಳನ್ನು, ಕಾಲಕಾಲಕ್ಕೆ ಸರ್ಕಾರದ ನಿರ್ದೇಶನಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

(2)ಆಯೋಗದ ಲೆಕ್ಕಪತ್ರಗಳನ್ನು ಕರ್ನಾಟಕದ ಮಹಾಲೇಖಪಾಲರ ಮೂಲಕ ಆಯಾ ವರ್ಷದಲ್ಲಿ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು.

**27. ಆಯೋಗದ ವಾರ್ಷಿಕ ವರದಿ.–** (1)ಆಯೋಗದ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಕಳೆದ ವರ್ಷದ ಅವಧಿಯಲ್ಲಿ ನಡೆಸಿದ ತನ್ನ ಕಾರ್ಯ ಚಟುವಟಿಕೆಗಳ ಸಂಪೂರ್ಣ ಲೆಕ್ಕಪತ್ರಗಳನ್ನು ಸೂಚಿಸಿದ ಹಣಕಾಸು ವರ್ಷ ಪೂರ್ಣಗೊಂಡ ದಿನಾಂಕದಿಂದ ಮೂರು ತಿಂಗಳೊಳಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರವು, ವಿಧಾನಮಂಡಲದ ಉಭಯ ಸದನಗಳ ಮುಂದೆ ಇದನ್ನು ಮಂಡಿಸಬಹುದು.

(2) ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ಕೂಡಲೇ ಆದಷ್ಟು ಬೇಗನೆ ಆಯೋಗವು ವಿಧಾನಮಂಡಲದ ಉಭಯ ಸದನಗಳ ಮುಂದೆ ಇದನ್ನು ಮಂಡಿಸಲು ಸರ್ಕಾರದ ಲೆಕ್ಕಪರಿಶೋಧಕರ ವರದಿಯೊಂದಿಗೆ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯ ಪ್ರತಿಯನ್ನು ಕಳುಹಿಸತಕ್ಕದ್ದು.

**28. ಆಯೋಗದ ಮೊಹರು.–**ಅಧ್ಯಕ್ಷರು ಹೊರಡಿಸಲಾದ ಆದೇಶದ ಮೂಲಕ ನಿರ್ಧಿಷ್ಟಪಡಿಸಲಾದಂತೆ ಆಯೋಗದ ಮೊಹರು ಇರತಕ್ಕದ್ದು.

**ನಮೂನೆ– I**

**(ನಿಯಮ 11(5) ನ್ನು ನೋಡಿ)**
**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**
**4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 1ನೇ ಮಹಡಿ,**
**ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,**
**ಬೆಂಗಳೂರು– 560027.**

## ವಾಸ್ತವಾಂಶಗಳ ಮತ್ತು ಸಾಕ್ಷ್ಯಗಳ ಸಂಗ್ರಹಣೆಗಾಗಿ ನೋಟೀಸು

**ಇವರಿಗೆ,**

ಈ ನೋಟೀಸಿನೊಂದಿಗೆ ಲಗತ್ತಿಸಿರುವ ದಿನಾಂಕ ....................... ರಂದು......................... ರಲ್ಲಿ ಹಾಜರಾಗಿ...................................... ಶೀರ್ಷಿಕೆ ಅಡಿಯಲ್ಲಿ .................................. ವೃತ್ತ ಪತ್ರಿಕೆ ಗಳಿಂದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳಿಂದ ಅರ್ಜಿ/ಫಿರ್ಯಾದು/ಮಾಹಿತಿಯನ್ನು ಆಯೋಗವು ಸ್ವೀಕರಿಸಿರುವುದರಿಂದ ಮತ್ತು ಆಯೋಗವು ವಿಷಯವನ್ನು ತಮಗೆ ಪ್ರದತ್ತವಾದ ಅಧಿಕಾರಗಳನುಸಾರವಾಗಿ ತನಿಖೆ/ವಿಚಾರಣೆ ಮಾಡಲು ತೀರ್ಮಾನಿಸಿರುವುದರಿಂದ, ಈ ಮೂಲಕ ನಿಮ್ಮನ್ನು ನೋಟೀಸು, ಅಂಚೆ, ಖುದ್ದಾಗಿ ಅಥವಾ ಇತರ ಯಾವುದೇ ಸಂಪರ್ಕದ ಮೂಲಕವಾಗಲಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಕೆಳಗೆ ಸಹಿ ಮಾಡಿದವರಿಗೆ ಆಪಾದನೆಗಳು/ ವಿಷಯಗಳ ಸಂಬಂಧ ಕೈಗೊಂಡ ಕ್ರಮದ ಬಗ್ಗೆ ಸಂಗತಿಗಳು ಮತ್ತು ಮಾಹಿತಿಯನ್ನು ಸಲ್ಲಿಸಲು ಕೋರಲಾಗಿದೆ.

ನಿಗಧಿತ ಕಾಲದೊಳಗೆ ನಿಮ್ಮಿಂದ ಉತ್ತರವನ್ನು ಆಯೋಗವು ಸ್ವೀಕರಿಸಿಲ್ಲದ ಪ್ರಕರಣದಲ್ಲಿ, ಆಯೋಗವು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿನಿಯಮದ ಮೇರೆಗೆ ತನಗೆ ಪ್ರದತ್ತವಾದ ಸಿವಿಲ್ ನ್ಯಾಯಾಲಯಗಳ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಆಯೋಗದ ಮುಂದೆ ಖುದ್ದಾಗಿ ಅಥವಾ ಪ್ರತಿನಿಧಿಯ ಮೂಲಕ ಹಾಜರಾಗಲು ನಿಮಗೆ ಸಮನ್ಸ್ ನೀಡಲಾಗಿದೆ ಎಂಬ ನೋಟೀಸನ್ನು ತೆಗೆದುಕೊಳ್ಳಬೇಕು.

ಸಹಿ/–
ಕಾರ್ಯದರ್ಶಿ / ಅಧಿಕೃತಗೊಳಿಸಲಾದ ಅಧಿಕಾರಿ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

ದಿನಾಂಕ:

**ನಮೂನೆ– II**

**(ನಿಯಮ 11(5) ನ್ನು ನೋಡಿ)**

**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**

**4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 1ನೇ ಮಹಡಿ,**

**ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,**

**ಬೆಂಗಳೂರು– 560027.**

ಪ್ರಕರಣ ಸಂಖ್ಯೆ:.................................

ಇವರಿಗೆ,

...............................................

...............................................

...............................................

## ವಿಚಾರಣಾ ನೋಟೀಸು

ನೀವು ಸಲ್ಲಿಸಿದ ದಿನಾಂಕ ............................ ರ ದೂರು ಮತ್ತು ಮೇಲಿನ ಪ್ರಕರಣ ಸಂಖ್ಯೆ........................ರಲ್ಲಿ ಈ ಆಯೋಗದಲ್ಲಿ ನೋಂದಾಯಿಸಿದ ದೂರನ್ನು ಪರಿಶೀಲನೆ/ ವಿಚಾರಣೆಗಾಗಿ ಆಯೋಗದ ಮುಂದೆ ಪಟ್ಟಿ ಮಾಡಲಾಗಿದ್ದು ನೋಟೀಸನ್ನು ತೆಗೆದುಕೊಳ್ಳುವುದು. ಕೆಳಗೆ ಸೂಚಿಸಲಾದ ಸ್ಥಳ ಮತ್ತು ಕಾಲದಲ್ಲಿ ಹಾಜರಾಗಲು ನಿಮಗೆ ಸೂಚಿಸಲಾಗಿದೆ. ನೀವು ಖುದ್ದಾಗಿ ಅಥವಾ ಯುಕ್ತ ಅಧಿಕೃತ ಕಾನೂನು ಪ್ರತಿನಿಧಿಯ ಮೂಲಕ ಹಾಜರಾಗಬಹುದು. ನಿಮ್ಮ ದೂರಿನ ಸಮರ್ಥನೆಗಾಗಿ ಸಾಕ್ಷ್ಯವನ್ನು ಸಲ್ಲಿಸಲು ಸಹ ನೀವು ಹಕ್ಕುಳ್ಳವರಾಗಿದ್ದೀರಿ. ನೀವು ಇಚ್ಛಿಸಿದರೆ ಯಾವುದೇ ಸಾಕ್ಷಿಗೆ ಸಮನ್ ಹೊರಡಿಸಲು ವಿಚಾರಣಾ ದಿನಾಂಕಕ್ಕೆ ಸಾಕಷ್ಟು ಮುಂಚಿತವಾಗಿ ಯಾವುದೇ ಸಾಕ್ಷಿಗಳ ಹೆಸರು ಮತ್ತು ವಿಳಾಸದ ಪಟ್ಟಿಯನ್ನು ಆಯೋಗಕ್ಕೆ ಒದಗಿಸಬಹುದು.

ವಿಚಾರಣೆಯ ದಿನಾಂಕ :

ವಿಚಾರಣೆಯ ಕಾಲ ಮತ್ತು ಸ್ಥಳ :

ಕಾರ್ಯದರ್ಶಿ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

ಬೆಂಗಳೂರು.

ದಿನಾಂಕ:

**ನಮೂನೆ- III**

**(ನಿಯಮ 11(5) ನ್ನು ನೋಡಿ)**
**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**
**4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 1ನೇ ಮಹಡಿ,**
**ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,**
**ಬೆಂಗಳೂರು- 560027.**

ಪ್ರಕರಣ ಸಂಖ್ಯೆ:................................
ಇವರಿಗೆ,

..............................................
...............................................
..............................................

**ಸಾರ್ವಜನಿಕ ನೋಟೀಸು**

ಆಯೋಗವು ದೂರನ್ನು ಸ್ವೀಕರಿಸಿರುವುದರಿಂದ ಇದನ್ನು ಆಯೋಗವು ಕೆಳಗೆ ಸೂಚಿಸಿದ ಸ್ಥಳ ಮತ್ತು ಕಾಲದಲ್ಲಿ ವಿಚಾರಣೆಗೆ ತೆಗೆದುಕೊಂಡಿರುತ್ತದೆ.

ಆದ್ದರಿಂದ ಈ ಸಾರ್ವಜನಿಕ ನೋಟೀಸನ್ನು ಸದರಿ ದೂರಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಇದ್ದರೆ ಅದನ್ನು ನೀಡುವಂತೆ ತಿಳಿಸಲಾಗಿದೆ. ಯಾರೇ ವ್ಯಕ್ತಿ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸಿದರೆ ವಿಚಾರಣೆಯ ದಿನಾಂಕಕ್ಕೆ ಸಾಕಷ್ಟು ಮೊದಲೇ ಲಿಖಿತದಲ್ಲಿ ಹಾಗೆ ಮಾಡಬಹುದು ಅಂಥ ಎಲ್ಲ ಲಿಖಿತ ಆಕ್ಷೇಪಣೆಗಳನ್ನು ........................ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು.

1. ಪಿರ್ಯಾದುದಾರನ ಹೆಸರು ಮತ್ತು ವಿಳಾಸ :
2. ವಿಚಾರಣೆಯ ದಿನಾಂಕ ಮತ್ತು ಕಾಲ :
3. ವಿಚಾರಣೆಯ ಸ್ಥಳ :
4. ಪಿರ್ಯಾದುದಾರನು ಕೋರಿದ ಪರಿಹಾರ :

ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ಅಧಿಕೃತ ಕಾನೂನು ಪ್ರತಿನಿಧಿಗಳ ಮೂಲಕ ಸಲ್ಲಿಸಬಹುದು.

ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
ಬೆಂಗಳೂರು.

ದಿನಾಂಕ:

## ನಮೂನೆ– IV

**(ನಿಯಮ 14ನ್ನು ನೋಡಿ)**
**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**
**4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 1ನೇ ಮಹಡಿ,**
**ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,**
**ಬೆಂಗಳೂರು– 560027.**

## ಸಮನ್ಸ್

ಕಡತ ಸಂಖ್ಯೆ:
ಇವರಿಗೆ,

ಕರ್ನಾಟಕ ರಾಜ್ಯಸಫಾಯಿ ಕರ್ಮಚಾರಿಗಳ ಅಧಿನಿಯಮದ ಮೇರೆಗೆ ರಾಜ್ಯ ಆಯೋಗವು ತನಗೆ ಪ್ರದತ್ತವಾದ ಅಧಿಕಾರಗಳ ಅನುಸಾರ ಈ ಕೆಳಕಂಡ ವಿಷಯಗಳನ್ನು ತನಿಖೆ ಮಾಡಲು ತೀರ್ಮಾನಿಸಿರುವುದರಿಂದ ......................... ಸ್ಥಳದಲ್ಲಿ ................. ಗಂಟೆಗಳಿಗೆ................ ನೇ ...............20............... ರಂದು ರಾಜ್ಯ ಆಯೋಗದ ಮುಂದೆ ಖುದ್ದಾಗಿ ಹಾಜರಾಗಲು ನಿಮ್ಮ ಹಾಜರಾತಿಯನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.

ಪ್ರಕರಣದ ಉಲ್ಲೇಖ:

ಕಾನೂನುಬದ್ಧ ವಿನಾಯಿತಿ ಇಲ್ಲದೆ ಈ ಆದೇಶವನ್ನು ಪಾಲಿಸಲು ನೀವು ತಪ್ಪಿದಲ್ಲಿ ಸಿವಿಲ್ ಪ್ರಕ್ರಿಯ ಸಂಹಿತೆ 1908ರ XVIನೇ ಆದೇಶದ 12ನೇ ನಿಯಮದಲ್ಲಿ ಹೇಳಲಾದ ಗೈರುಹಾಜರಾತಿಯ ಪರಿಣಾಮಗಳಿಗೆ ನೀವು ಒಳಪಡತಕ್ಕದ್ದು.

............. ನೇ.............. 20............ ರಂದು ಸಿವಿಲ್ ನ್ಯಾಯಾಲಯಗಳ ಅಧಿಕಾರಗಳನ್ನು ಚಲಾಯಿಸಿ ಸ್ವತ: ನನ್ನಿಂದ ನೀಡಲಾಗಿದೆ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಮೊಹರನ್ನು ಹಾಕಲಾಗಿದೆ.

ನ್ಯಾಯಾಲಯದ ಅಧಿಕಾರಿ

**ಮೊಹರು**

**ನಮೂನೆ– V**

**(ನಿಯಮ 14ನ್ನು ನೋಡಿ)**

**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**

**4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 1ನೇ ಮಹಡಿ,**

**ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,**

**ಬೆಂಗಳೂರು– 560027.**

**ವಾರಂಟ್ಸ್**

ಇವರಿಗೆ,

..............................................

..............................................

..............................................

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಿ .......................... ನಿವಾಸಿಯಾದ .......................... ರವರಿಗೆ ಸಮನ್ ಅನ್ನು ಜಾರಿ ಮಾಡಲಾಗಿತ್ತು. ಆದರೆ ಹಾಜರಾಗಲು ವಿಫಲಗೊಂಡಿರುವುದರಿಂದ (ಸಮನ್ ಜಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ತಲೆಮರೆಸಿಕೊಳ್ಳುವ ಮೂಲಕ) ಈ ಮೂಲಕ ನಿಮ್ಮನ್ನು ದಸ್ತಗಿರಿ ಮಾಡಲು ಮತ್ತು ಸದರಿ .......................... ರವರನ್ನು ರಾಜ್ಯ ಆಯೋಗ, ಬೆಂಗಳೂರು ಇವರ ಮುಂದೆ ಹಾಜರುಪಡಿಸಲು ನಿಮಗೆ ಆದೇಶಿಸಲಾಗಿದೆ.

ಅಲ್ಲದೆ ಇದನ್ನು ಜಾರಿಗೊಳಿಸಿದಂಥ ದಿನ, ವಿಧಾನ ಮತ್ತು ಇದನ್ನು ಜಾರಿಗೊಳಿಸಿರುವುದಕ್ಕೆ ಕಾರಣವನ್ನು ಪ್ರಮಾಣೀಕರಿಸಿದ ಹಿಂಬರಹದೊಂದಿಗೆ ...............ನೇ....................ರ 20 ............... ರಂದು ಅಥವಾ ಅದಕ್ಕೂ ಮೊದಲೆ ಈ ವಾರೆಂಟ್ ಅನ್ನು ಹಿಂತಿರುಗಿಸಲು ನಿಮಗೆ ಆದೇಶಿಸಲಾಗಿದೆ.

................ನೇ..................ರ 20.................. ರಂದು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಮೊಹರಿನೊಂದಿಗೆ ನನ್ನಿಂದ ನೀಡಲಾಗಿರುತ್ತದೆ.

ಸಹಿ/–

**ಮೊಹರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶಂಭುಲಿಂಗಯ್ಯ)**
ಸರ್ಕಾರದ ಉಪ ಕಾರ್ಯದರ್ಶಿ–1,
ಸಮಾಜ ಕಲ್ಯಾಣ ಇಲಾಖೆ.